KABR420121492025

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ದೊಡ್ಡಬಳ್ಳಾಪುರ**

**:ಉಪಸ್ಥಿತರು:**

**ಶ್ರೀಮತಿ ಪ್ರೀತಿ.ಕೆ., ಎಲ್.ಎಲ್.ಎಂ.,**

ಅಪರ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ.,ದೊಡ್ಡಬಳ್ಳಾಪುರ

**ದಿನಾಂಕ 27 ನೇ ಮಾರ್ಚ್, 2026**

**ಸಿ.ಸಿ. ಸಂಖ್ಯೆಃ 9918/2025**

**ಪಿರ್ಯಾದಿ :** **ದೊಡ್ಡಬೆಳವಂಗಲ ಪೊಲೀಸ್ ಠಾಣೆ**

**(ಸಹಾಯಕ ಸರ್ಕಾರಿ ಅಭಿಯೋಜಕರು)**

**// ವಿರುದ್ಧ //**

**ಆರೋಪಿತರು:** 1. **ಶ್ರಿ. ನಾಗರಾಜು ಬಿ.ಹೆಚ್**

ಬಿನ್ ಹುಚ್ಚಹನುಮಯ್ಯ

ವಯಸ್ಸು 30 ವರ್ಷ,

**2. ಶ್ರೀ. ಮಾರುತಿ**

ಬಿನ್ ಶ್ರೀನಿವಾಸ

ವಯಸ್ಸು 25 ವರ್ಷ,

**3. ನರಸಿಂಹಮೂರ್ತಿ @ ಪುಟ್ಟ**

ಬಿನ್ ಹುಚ್ಚಹನುಮಯ್ಯ

ವಯಸ್ಸು 30 ವರ್ಷ,

**ಎಲ್ಲರ ವಾಸಃ**

ಬೊಮ್ಮನಹಳ್ಳಿ ಗ್ರಾಮ,

ದೊಡ್ಡಬೆಳವಂಗಲ ಹೋಬಳಿ,

ದೊಡ್ಡಬಳ್ಳಾಪುರ ತಾಲ್ಲೂಕು,

ಬೆಂಗಳೂರು ಗ್ರಾಮಾಂತರ ಜಿಲ್ಲೆ.

**(ಶ್ರೀ .ಎಸ್.ಎಂ., ವಕೀಲರು)**

**:ತೀರ್ಪು:**

ದೊಡ್ಡಬೆಳವಂಗಲ ಪೋಲೀಸ್ ಠಾಣಾ ಆರಕ್ಷಕ ಉಪ ನಿರೀಕ್ಷಕರು ಆರೋಪಿತರ ವಿರುದ್ಧ ಭಾ.ನ್ಯಾ.ಸಂ.ಕಲಂ: 115(2), 126(2), 351(2) ಮತ್ತು 352 ಸಹಕಲಂಃ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಆರೋಪಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನೆ ಪ್ರಕರಣದ ಸಾರಾಂಶ ಈ ಕೆಳಗಿನಂತೆ ಇರುತ್ತದೆಃ**

ದಿನಾಂಕ:01.11.2025 ರಂದು ರಾತ್ರಿ 7-30 ರ ಸಮಯದಲ್ಲಿ ದೊಡ್ಡಬೆಳವಂಗಲ ಪೊಲೀಸ್ ಠಾಣಾ ಸರಹದ್ದು, ದೊಡ್ಡಬಳ್ಳಾಪುರ ತಾಲ್ಲೂಕು, ದೊಡ್ಡಬೆಳವಂಗಲ ಹೋಬಳಿ, ಬೊಮ್ಮನಹಳ್ಳಿ ಗ್ರಾಮದಲ್ಲಿರುವ ರಮೇಶ್ ಬಿನ್ ರಾಮಕೃಷ್ಣಪ್ಪರವರ ಜಮೀನಿನ ನೇರದಲ್ಲಿ ಚಾಸಾ-1 ರವರು ಕೆಲಸ ಮುಗಿಸಿಕೊಂಡು ಶ್ರೀ ಚನ್ನಗರಾಯಸ್ವಾಮಿ ದೇವಾಲಯಕ್ಕೆ ಹೋಗುವ ರಸ್ತೆಯಲ್ಲಿ ನಡೆದುಕೊಂಡು ಬರುತ್ತಿದ್ದಾಗ ಆರೋಪಿತರು ಚಾಸಾ-1 ರವರನ್ನು ಅಡ್ಡಗಟ್ಟಿ ಅವರೊಂದಿಗೆ ಜಗಳ ತೆಗೆದು, ಕೆಳಕ್ಕೆ ಹಾಕಿಕೊಂಡು ಕೈಗಳಿಂದ ಅವರ ಮೈಕೈಗಳಿಗೆ ಹೊಡೆದು ನೋವುಂಟು ಮಾಡಿ, 1 ನೇ ಆರೋಪಿಯು ಚಾಸಾ-1 ರವರಿಗೆ ಅವಾಚ್ಯಶಬ್ದಗಳಿಂದ ಬೈದು, ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆಂದು, ಅಲ್ಲದೇ ಚಾಸಾ-1 ರವರಿಗೆ 1 ನೇ ಆರೋಪಿಯು ನಿನ್ನ ಹೆಂಡತಿಯನ್ನು ನೀನು ಬಾಳಿಸಿಲ್ಲ, ನಾನು ಬಾಳಿಸುತ್ತೇನೆಂದು ಆಗಾಗ ಹಿಯಾಳಿಸಿ ಮತನಾಡುತ್ತಿದ್ದರಿಂದ ಚಾಸಾ-1 ರವರು ಮನನೊಂದು ದಿನಾಂಕಃ 02.11.2025 ರಂದು ಬೆಳಗ್ಗೆ 11 ಗಂಟೆ ಸಮಯದಲ್ಲಿ ತಮ್ಮ ಮನೆ ಬಳಿ ತನ್ಮೂಲಕ ತಾನೇ ಪಾವಡಿನ್ ಅಯೋಡಿನ್ ಅಂಶವಿರುವ ವಿಷವನ್ನು ಸೇವನೆ ಮಾಡಿದ್ದರಿಂದ ಚಾಸಾ-1 ರವರಿಗೆ ಸಾಮಾನ್ಯ ಸ್ವರೂಪದ

ಗಾಯವುಂಟಾಗಿರುತ್ತದೆಂದು, ಆ ಮೂಲಕ ಆರೋಪಿತರ ವಿರುದ್ಧ ಮೇಲ್ಕಂಡ ಶಿಕ್ಷಾರ್ಹ ಅಪರಾಧ ಮಾಡಿರುವುದಾಗಿ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಲಾಗಿದೆ.

3. ಈ ಪ್ರಕರಣದಲ್ಲಿ ಪೋಲಿಸರು ಪ್ರಥಮ ವರ್ತಮಾನ ಹೇಳಿಕೆ (ದೂರನ್ನು) ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆಃ143/2025 ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿರುತ್ತಾರೆ. ತನಿಖೆಯ ನಂತರ ಆರೋಪಿತರ ವಿರುದ್ದ ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ.

4. ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ನಂತರ ನ್ಯಾಯಾಲಯ ಆಪಾದಿಸಿದ ಅಪರಾಧಗಳಿಗೆ ಸಂಜ್ಞೇಯ ತೆಗೆದುಕೊಂಡು, ಆರೋಪಿತರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲು ಮಾಡಿ ಸಮನ್ಸ್ ಹೊರಡಿಸಿರುತ್ತದೆ. ಆರೋಪಿತರು ಸಮನ್ಸ್ ಸ್ವೀಕಾರ ಮಾಡಿ ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ.

5. ದಂ.ಪ್ರ.ಸಂ.ಕಲಂ 230 ರಡಿಯಲ್ಲಿ ದೋಷಾರೋಪಣಾ ಪಟ್ಟಿಯ ಪ್ರತಿಯನ್ನು ಆರೋಪಿತರಿಗೆ ನೀಡಿ, ದೋಷಾರೋಪಣೆಯನ್ನು ರಚಿಸಿ ತಿಳಿಯುವಂತೆ ಓದಿ ಹೇಳಿದಾಗ ಆರೋಪಿತರು ತಾವು ಯಾವುದೇ ತಪ್ಪು ಮಾಡಿಲ್ಲ ವಿಚಾರಣೆ ಆಗಬೇಕೆಂದು ಕೇಳಿಕೊಂಡಿರುತ್ತಾರೆ.

6. ಅಭಿಯೋಜನೆ ಪರ ಒಬ್ಬ ಸಾಕ್ಷಿದಾರರನ್ನು ವಿಚಾರಣೆಗೊಳಪಡಿಸಿ ನಿಪಿ-1 ಮತ್ತು ನಿಪಿ-2 ದಾಖಲೆಗಳನ್ನು ಗುರುತಿಸಿಕೊಳ್ಳಲಾಗಿರುತ್ತದೆ. ಆರೋಪಿತರ ವಿರುದ್ಧ ಆರೋಪಗಳಿಗೆ ಸಂಬಂಧಿಸಿದ ಸಾಕ್ಷ್ಯಾಧಾರಗಳು ಲಭ್ಯವಿರದ ಕಾರಣ ದಂ.ಪ್ರ.ಸಂ.ಕಲಂ 313 ರಡಿಯಲ್ಲಿ ಆರೋಪಿತರ ಹೇಳಿಕೆಯನ್ನು ಕೈ ಬಿಡಲಾಗಿರುತ್ತದೆ. ಆರೋಪಿತರು ತಮ್ಮ ಪರ ಯಾವುದೇ

ಸಾಕ್ಷಿಯನ್ನು ವಿಚಾರಣೆಗೆ ಒಳಪಡಿಸಿಕೊಂಡಿಲ್ಲ ಮತ್ತು ದಾಖಲೆಗಳನ್ನು ಗುರುತಿಸಿ ಕೊಂಡಿರುವುದಿಲ್ಲ.

7. ಅಭಿಯೋಜನೆ ಪರ ಹಾಗೂ ಆರೋಪಿತರ ಪರ ವಕೀಲರ ವಾದ ಕೇಳಲಾಯಿತು ಮತ್ತು ಈ ಪ್ರಕರಣಕ್ಕೆ ಸಂಬಂಧಿಸಿದ ನ್ಯಾಯಾಲಯದ ಸಮ್ಮುಖದಲ್ಲಿರುವ ದಾಖಲೆಗಳನ್ನು ಕೂಲಂಕುಶವಾಗಿ ಪರಿಶೀಲಿಸಲಾಯಿತು.

**8. ಮೇಲ್ಕಂಡ ಸಂಗತಿಗಳಿಂದ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.**

***ಅಂಶ-1:***- ದಿನಾಂಕ:01.11.2025 ರಂದು ರಾತ್ರಿ 7-30 ರ ಸಮಯದಲ್ಲಿ ದೊಡ್ಡಬೆಳವಂಗಲ ಪೊಲೀಸ್ ಠಾಣಾ ಸರಹದ್ದು, ದೊಡ್ಡಬಳ್ಳಾಪುರ ತಾಲ್ಲೂಕು, ದೊಡ್ಡಬೆಳವಂಗಲ ಹೋಬಳಿ, ಬೊಮ್ಮನಹಳ್ಳಿ ಗ್ರಾಮದಲ್ಲಿರುವ ರಮೇಶ್ ಬಿನ್ ರಾಮಕೃಷ್ಣಪ್ಪರವರ ಜಮೀನಿನ ನೇರದಲ್ಲಿ ಚಾಸಾ-1 ರವರು ಕೆಲಸ ಮುಗಿಸಿಕೊಂಡು ಶ್ರೀ ಚನ್ನಗರಾಯಸ್ವಾಮಿ ದೇವಾಲಯಕ್ಕೆ ಹೋಗುವ ರಸ್ತೆಯಲ್ಲಿ ನಡೆದುಕೊಂಡು ಬರುತ್ತಿದ್ದಾಗ ಆರೋಪಿತರು ಚಾಸಾ-1 ರವರನ್ನು ಅಡ್ಡಗಟ್ಟಿ ಅವರೊಂದಿಗೆ ಜಗಳ ತೆಗೆದು, ಕೆಳಕ್ಕೆ ಹಾಕಿಕೊಂಡು ಕೈಗಳಿಂದ ಅವರ ಮೈಕೈಗಳಿಗೆ ಹೊಡೆದು ನೋವುಂಟು ಮಾಡಿ, 1 ನೇ ಆರೋಪಿಯು ಚಾಸಾ-1 ರವರಿಗೆ ಅವಾಚ್ಯಶಬ್ದಗಳಿಂದ ಬೈದು, ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆಂದು, ಅಲ್ಲದೇ ಚಾಸಾ-1 ರವರಿಗೆ 1 ನೇ ಆರೋಪಿಯು ನಿನ್ನ ಹೆಂಡತಿಯನ್ನು ನೀನು ಬಾಳಿಸಿಲ್ಲ, ನಾನು ಬಾಳಿಸುತ್ತೇನೆಂದು ಆಗಾಗ ಹಿಯಾಳಿಸಿ ಮತನಾಡುತ್ತಿದ್ದರಿಂದ ಚಾಸಾ-1 ರವರು ಮನನೊಂದು ದಿನಾಂಕಃ 02.11.2025 ರಂದು ಬೆಳಗ್ಗೆ 11 ಗಂಟೆ ಸಮಯದಲ್ಲಿ ತಮ್ಮ ಮನೆ ಬಳಿ ತನ್ಮೂಲಕ ತಾನೇ ಪಾವಡಿನ್ ಅಯೋಡಿನ್ ಅಂಶವಿರುವ ವಿಷವನ್ನು ಸೇವನೆ ಮಾಡಿದ್ದರಿಂದ ಚಾಸಾ-1 ರವರಿಗೆ ಸಾಮಾನ್ಯ ಸ್ವರೂಪದ ಗಾಯವುಂಟಾಗಿರುತ್ತದೆಂದು, ಆ ಮೂಲಕ ಭಾ.ನ್ಯಾ.ಸಂ.ಕಲಂ 115(2), 126(2), 351(2) ಮತ್ತು 352 ಸಹಕಲಂಃ 3(5)

ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂಬುದನ್ನು ಅಭಿಯೋಜನೆ ಸಂಶಯಾತೀತವಾಗಿ ರುಜುವಾತು ಪಡಿಸಿರುತ್ತದೆಯೇ ?

***ಅಂಶ-2:***- *ಏನು ಆದೇಶ ?*

9. **ಈ ಮೇಲ್ಕಂಡ ಅಂಶಗಳನ್ನು ಈ ಕೆಳಕಂಡಂತೆ ಉತ್ತರಿಸಲಾಗಿದೆ.**

***ಅಂಶ :1 : ನಕಾರಾತ್ಮಕವಾಗಿ***

***ಅಂಶ :2: ಅಂತಿಮ ಆದೇಶದಂತೆ***

## :ಕಾರಣಗಳು:

10.**ಅಂಶಃ-1***:* ಆರೋಪಿತರ ವಿರುದ್ಧ ಹೊರಿಸಲಾದ ಆರೋಪಗಳನ್ನು ರುಜುವಾತು ಪಡಿಸಲು ಅಭಿಯೋಜನೆಯು ಪ್ರಾಸಾ-1 ರವರನ್ನು ವಿಚಾರಣೆಗೆ ಒಳಪಡಿಸಿಕೊಂಡಿದ್ದು, ನಿಪಿಃ1 ದಾಖಲೆಯನ್ನು ಗುರುತಿಸಿಕೊಂಡಿರುತ್ತದೆ. ನಿಪಿ:1:ದೂರು ಆಗಿರುತ್ತದೆ.

11. ಮುಂದುವರೆದು, ಅಭಿಯೋಜನೆ ಪರ ವಿಚಾರಣೆಗೊಳಪಡಿಸಲಾದ ಪ್ರಾಸಾ-1 ಈ ಪ್ರಕರಣದ ಪಿರ್ಯಾದಿ ಹಾಗೂ ನೊಂದ ವ್ಯಕ್ತಿಯಾಗಿದ್ದು ತಮ್ಮ ಸಾಕ್ಷ್ಯದಲ್ಲಿ ಆರೋಪಿತರು ಮತ್ತು ತನ್ನ ನಡುವೆ ವೈಯಕ್ತಿಕ ವಿಚಾರಕ್ಕಾಗಿ ಮಾತಿನ ಚಕಮಕಿಯಾಗಿದ್ದು, ಆಗ ತಾನು ಸಿಟ್ಟಾಗಿ ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ನಿಪಿ-1ಕ್ಕೆ ತನ್ನ ಸಹಿಯನ್ನು ಪಡೆದಿರುತ್ತಾರೆ. ನಿಪಿ-1 ರಲ್ಲಿನ ವಿಚಾರ ತನಗೆ ಗೊತ್ತಿಲ್ಲ. ಆರೋಪಿತರು ತನ್ನನ್ನು ಅಡ್ಡಗಟ್ಟಿ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಕೈಗಳಿಂದ ಹೊಡೆದಿಲ್ಲ ಹಾಗೂ ಪ್ರಾಣ ಬೆದಕರಿಕೆ ಹಾಕಿಲ್ಲ ಮತ್ತು ತಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸರ್ಕಾರಿ ಸಹಾಯಕ ಅಭಿಯೋಜಕರು ಪ್ರಾಸಾ-1 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ನ್ಯಾಯಾಲಯದ ಅನುಮತಿ ಪಡೆದು ಸಾಕ್ಷಿಯನ್ನು ಪಾಟೀಸವಾಲಿಗೆ

ಒಳಪಡಿಸಿ ನೀಡಿದಂತಹ ಎಲ್ಲ ಸಲಹೆಗಳನ್ನು ಸಾಕ್ಷಿ ನಿರಾಕರಿಸಿ ಅಲ್ಲಗಳೆದಿರುತ್ತಾರೆ ಮತ್ತು ರಾಜೀ ಆಗಿರುವುದಾಗಿ ನುಡಿದಿರುತ್ತಾರೆ.

12. ಮುಂದುವರೆದು, ಈ ಪ್ರಕರಣವನ್ನು ಆರೋಪಿತರು ಭಾ.ದಂ.ಸಂ. ಕಲಂಃ 115(2), 126(2), 351(2) ಮತ್ತು 352 ಸಹಕಲಂಃ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ದಾಖಲಿಸಿದ್ದು, ಅಭಿಯೋಜನೆಯು ಆರೋಪಿತರ ವಿರುದ್ಧದ ಆರೋಪವನ್ನು ಸ್ಥಾಪಿಸಲು ಪ್ರಾಸಾ-1 ರವರನ್ನು ವಿಚಾರಣೆಗೆ ಒಳಪಡಿಸಿರುತ್ತದೆ. ಪ್ರಾ.ಸಾ-1 ರವರು ಈ ಪ್ರಕರಣದ ಪಿರ್ಯಾದಿ ಮತ್ತು ನೊಂದವರಾಗಿದ್ದು, ತಮ್ಮ ಸಾಕ್ಷ್ಯದಲ್ಲಿ ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ. ನಿಪಿ-1 ರಲ್ಲಿನ ಯಾವ ಅಂಶವನ್ನು ನುಡಿದಿರುವುದಿಲ್ಲ. ಬದಲಿಗೆ ಚಾಸಾ-1 ತಮ್ಮ ಸಾಕ್ಷ್ಯದಲ್ಲಿ, ಆರೋಪಿತರು ಮತ್ತು ತನ್ನ ನಡುವೆ ವೈಯಕ್ತಿಕ ವಿಚಾರಕ್ಕಾಗಿ ಮಾತಿನ ಚಕಮಕಿಯಾಗಿದ್ದು, ಆಗ ತಾನು ಸಿಟ್ಟಾಗಿ ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ನಿಪಿ-1 ಕ್ಕೆ ತಮ್ಮ ಸಹಿ ಪಡೆದಿರುತ್ತಾರೆ ಹಾಗೂ ಅದರಲ್ಲಿನ ವಿಚಾರ ತಮಗೆ ಗೊತ್ತಿಲ್ಲವೆಂದು ನುಡಿದಿರುತ್ತಾರೆ. ಈ ಪ್ರಕರಣದ ಪ್ರಮುಖ ಸಾಕ್ಷಿಯ ಪ್ರತಿಕೂಲತೆ ಅಭಿಯೋಜನೆಗೆ ಆರೋಪಿತರ ಮೇಲೆ ಮಾಡಲಾಗಿರುವ ಆರೋಪಗಳನ್ನು ರುಜುವಾತುಪಡಿಸಲು ಸಾಧ್ಯವಾಗಿರುವುದಿಲ್ಲ. ಆರೋಪಿತರ ವಿರುದ್ಧ ಆಪಾದಿಸಿರುವ ಆರೋಪಗಳನ್ನು ಸಾಬೀತು ಪಡಿಸಲು ಯಾವುದೇ ಬಲವಾದ ಸಾಕ್ಷ್ಯ ಈ ನ್ಯಾಯಾಲಯದ ಮುಂದೆ ಇರುವುದಿಲ್ಲ. **ಆದ್ದರಿಂದ ಅಂಶ-1 ನ್ನು ನಕಾರಾತ್ಮಕ ಎಂದು ಉತ್ತರಿಸಲಾಗಿದೆ.**

13. **ಅಂಶ-2**: ಮೇಲೆ ಚರ್ಚಿಸಿರುವ ಅಂಶಗಳಿಗಾಗಿ ಈ ಕೆಳಗಿನಂತೆ,

**ಆದೇಶ**

ದಂ.ಪ್ರ.ಸಂ.ಕಲಂ 271(1) ರಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಆರೋಪಿತರ ವಿರುದ್ಧ ಮಾಡಲಾದ ಭಾ.ನ್ಯಾ.ಸಂ.ಕಲಂ 115(2),

126(2), 351(2) ಮತ್ತು 352 ಸಹಕಲಂ 3(5) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಗಳಿಂದ ಆರೋಪಿತರನ್ನು ದೋಷಮುಕ್ತಗೊಳಿಸಿ ನಿರ್ದೋಶಿಗಳು ಎಂದು ಖುಲಾಸೆಗೊಳಿಸಲಾಗಿದೆ.

ಆರೋಪಿತರು ಹಾಗೂ ಅವರುಗಳ ಜಾಮೀನುದಾರರು ಬರೆದುಕೊಟ್ಟ ಜಾಮೀನು ಮುಚ್ಚಳಿಕೆ ಪತ್ರಗಳನ್ನು ಅಪೀಲು ಅವಧಿಯ ನಂತರ ರದ್ದುಪಡಿಸಲು ಆದೇಶಿಸಲಾಗಿದೆ.

(ಉಕ್ತಲೇಖನವನ್ನು ಗಣಕಯಂತ್ರದ ಮೂಲಕ ನೇರವಾಗಿ ಶೀಘ್ರಲಿಪಿಗಾರರಿಗೆ ನೀಡಿ, ಅವರು ಬೆರಳಚ್ಚು ಮಾಡಿದ ನಂತರ, ತಪ್ಪುಗಳನ್ನು ತಿದ್ದಿ, ಸರಿಪಡಿಸಿ ತೆರೆದ ನ್ಯಾಯಾಲಯದಲ್ಲಿ ತೀರ್ಪನ್ನು ದಿಃ 27ನೇ ಮಾರ್ಚ್ 2026 ರಂದು ಘೋಷಿಸಲಾಗಿದೆ)

**Sd/-**
**(ಪ್ರೀತಿ.ಕೆ)**
ಅಪರ ಸಿವಿಲ್ ನ್ಯಾಯಾಧೀಶರು &
ಜೆ.ಎಂ.ಎಫ್.ಸಿ., ದೊಡ್ಡಬಳ್ಳಾಪುರ.

**:ಅನುಬಂಧ:**

**1. ಅಭಿಯೋಜನೆ ಪರ ಸಾಕ್ಷಿಗಳ ಪಟ್ಟಿಃ**

ಪ್ರಾ.ಸಾ :1 : ಉಮೇಶ್

**2. ಅಭಿಯೋಜನೆ ಪರ ದಾಖಲೆಗಳ ಪಟ್ಟಿಃ**

ನಿಪಿ :1 : ದೂರು

**3. ಅಭಿಯೋಜನೆ ಪರ ಮುದ್ದೆ ಮಾಲುಗಳ ಪಟ್ಟಿಃ**

-ಇಲ್ಲಾ-

**4. ಆರೋಪಿಗಳ ಪರ ಸಾಕ್ಷಿಗಳ ಪಟ್ಟಿಃ**

-ಇಲ್ಲಾ-

**5. ಆರೋಪಿಗಳ ಪರ ದಾಖಲೆಗಳ ಪಟ್ಟಿಃ**

-ಇಲ್ಲಾ-

**Sd/-**
**(ಪ್ರೀತಿ.ಕೆ)**
ಅಪರ ಸಿವಿಲ್ ನ್ಯಾಯಾಧೀಶರು &
ಜೆ.ಎಂ.ಎಫ್.ಸಿ., ದೊಡ್ಡಬಳ್ಳಾಪುರ